
# ಕೋಟೆ




ಯಾರನ್ನೂ ಬಿಡದೆ
ಹೃದಯದ ನಾಲ್ಕು ಕೋಣೆಗಳ ಸುತ್ತ
ಕೋಟೆಕಟ್ಟಿ ಕುಳಿತಿರುವ ಅವಳ
ಸ್ವಾರ್ಥವನ್ನು ನಾನು ದೂರಿದರೂ
ಅವಳ ಧೈರ್ಯವನ್ನು ಮೆಚ್ಚುತ್ತೇನೆ

ಅದೆಷ್ಟೋ ದಾಳಿಕೋರರು
ಹೊರಗಡೆ ಚೂಪಾದ ಕತ್ತಿಗಳನ್ನೆತ್ತಿ ಗದ್ದಲವೆಬ್ಬಿಸಿದ್ದಾರೆ
ಎಲ್ಲಿಯವರೆಗೆ ನೀನು ಬಲಶಾಲಿಯೋ
ಅಲ್ಲಿಯವರೆಗೆ ನನಗ್ಯಾವ ಆಪತ್ತೂ ಇರುವುದಿಲ್ಲ

ಅಪ್ಪ, ಅಮ್ಮ, ತಮ್ಮ, ತಂಗಿ
ನಿನ್ನ ಗಟ್ಟಿತನಕ್ಕೆ ಹುಬ್ಬೇರಿಸಿ ಹ್ಲೂಂಗುಟ್ಟಿದ್ದಾರೆ

ಅವರದೆಲ್ಲರದ್ದೂ ಒಂದೇ ಕೋರಿಕೆ–
ಅಲ್ಲಿ ಒಂದಿಷ್ಟು ಹೂಗಿಡಗಳನ್ನು ಬೆಳೆಸು
ಹಕ್ಕಿಗಳಿಗೆ ಗೂಡುಕಟ್ಟಲು ತಿಳಿಸು
ಹಾಡುವುದನ್ನು ಕಲಿಸು
ನಿನಗೆ ಗೊತ್ತಲ್ಲವೇ, ಅವನು ಕಾವ್ಯವನ್ನೂ ನಿನ್ನನ್ನೂ
ಸಾಯುವಂತೆ ಇಷ್ಟಪಡುತ್ತಾನೆ.

ಹಾಗೆಯೇ ಒಂದೆರೆಡು ಮಕ್ಕಳನ್ನು ಹಡೆದುಬಿಡು
ಮಕ್ಕಳೊಂದಿಗೆ ಅವನನ್ನೂ ಸಲಹು
ಮಕ್ಕಳು ನಿನ್ನ ಮೊಲೆಚೀಪುತ್ತ ಬೆಳೆಯುತ್ತಿರುವುದನ್ನು
ಕಂಡ ಅವನು ಎತ್ತರೆತ್ತರಕ್ಕೆ ಬೆಳೆಯುತ್ತಾನೆ

ಆಗ ನಿನ್ನ ಪ್ರೀತಿಗೆ
ಯಾವ ಕಾಯಿಲೆಯೂ ಅಂಟುವುದಿಲ್ಲ
ಯಾವ ದಾಳಿಯೂ ತಟ್ಟುವುದಿಲ್ಲ

**● ನಾಗರಾಜ್ ಕಾಂಬಳೆ ಅಥಣಿ**